Central Reserve Food Depot, Kadur (Recovery of Shortages)

Q.—550. Sri Y. M. CHANDRASEKHARAIYA (Kadur).—

Will the Government be pleased to state :—

(*a*) the amount so far recovered in respect of the amount of shortage noticed in the Central Reserve Food Depot at Kadur ;

(*b*) how many rupees worth of shortage was found to have occurred ;

(*c*) what are the details of the report made by the departmental Audit Superintendent and clerks after the auditing of accounts and papers ;

(*d*) what is the final decision of the Government on their report ?

A.—Sri H. SIDDAVEERAPPA (Minister for Home and Industries).—

(*a*) Rs. 4,399-4-0.

(*b*) Rs. 49,978-11-0 for the period from 1st August 1943 to 31st March 1952.

(*c*) These audit reports relate to past 8 to 10 years. The shortages under each item are embodied in the individual Audit Reports which are too numerous to be mentioned here.

(*d*) The audit reports are being examined.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇಲ್ಲಿಗೆ ಹಣ ಕಮ್ಮಿ ಬಿದ್ದು 10 ವರ್ಷಗಳಿಗೆ ಮೇಲಾಯಿತು. ಆ ಲೆಕ್ಕಗಳ ತನಿಖೆ ಇನ್ನೂ ಪರಿಶೀಲನೆ ಆಗುತ್ತಿದೆಯೆಂದು ಹೇಳಿದ್ದೀರಿ. ಅದೆಲ್ಲವನ್ನೂ ವಿಮರ್ಶೆಮಾಡಲು ತಮಗೆ ಇನ್ನು ಎಷ್ಟು ವರ್ಷಗಳು ಬೇಕಾತ್ತವೆ ?

*ಶ್ರೀ ಎಚ್. ಸಿದ್ದವೀರಪ್ಪ.—ತಾವು ಕೇಳುತ್ತಿರುವು ದೆಲ್ಲಾ ಬಹಳ ಹಳೆಯ ಲೆಕ್ಕಗಳು. ಅವುಗಳನ್ನು ಸರಿಯಾಗಿ ವಿಮರ್ಶೆಮಾಡಿ ನೋಡತಕ್ಕ ಬಗ್ಗೆ ದಕ್ಷರಾದಂಥ ಒಬ್ಬ ಸೀನಿಯರ್ ಆಫೀಸರನ್ನು ಅಲ್ಲಿಗೆ ಈಗ ಹಾಕಲಾಗಿದೆ. ಅವರು ಅವುಗಳನ್ನೆಲ್ಲಾ ತಪಶೀಲಾಗಿ ನೋಡುತ್ತಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇಲ್ಲಿಯವರೆಗೆ ವಸೂಲಾಗಿರುವುದು 4,399 ಚಿಲ್ಲರೆ ರೂಪಾಯಿಗಳು. ಇನ್ನೂ ಹೀಗೆ ಖೋತಾ ಆಗಿರುವುದನ್ನು ವಸೂಲ್ಮಾಡುವುದಕ್ಕೆ ಇನ್ನೆಷ್ಟು ದಿವಸಗಳು ಬೇಕಾಗುತ್ತದೆ ?

ಶ್ರೀ ಎಚ್. ಸಿದ್ದವೀರಪ್ಪ.—ಇದರಲ್ಲಿ ಹಣವು ಎಲ್ಲಿಯೂ ಹೋಗಿಲ್ಲ. ಆಡಿಟರ ಅಬ್ಜೆಕ್ಷನ್ ಆಗಿದೆ. ಆದರೆ ಇದರಲ್ಲಿ ಕೆಲವು ಮೊಬಲಗನ್ನು ರೈಟ್ ಆಫ್ ಮಾಡಬೇಕಾಗುತ್ತದೆ. ಇದರಲ್ಲಿ ಹೀಗೆಲ್ಲಾ ಎಷ್ಟೋ ಕಷ್ಟಗಳಿವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಬಾಕಿ ನಿಂತಿರುವ ಮೊಬಲಗೆಷ್ಟು ?

ಶ್ರೀ ಎಚ್ ಸಿದ್ದವೀರಪ್ಪ.—ವಸೂಲ್ಮಾಡತಕ್ಕದ್ದೂ ಇದೆ, ರೈಟ್ ಆಫ್ ಮಾಡತಕ್ಕದ್ದೂ ಇದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ನಾಲ್ಕು ಸಾವಿರ ಚಿಲ್ಲರೆ ರೂಪಾಯಿಗಳನ್ನು ತಾವು ಯಾರುಯಾರಿಂದ ವಸೂಲ್ಮಾಡಿದ್ದೀರಿ ? ಇನ್ನೆಷ್ಟು ಗಂಟು ಮುಳುಗುತ್ತದೆ ?

ಶ್ರೀ ಎಚ್. ಸಿದ್ದವೀರಪ್ಪ.—ಈಗಾಗಲೇ ನಾನು ತಮಗೆ ಅರಿಕೆ ಮಾಡಿಕೊಂಡಿರುವಂತೆ ಇದೆಲ್ಲವನ್ನೂ ನಿಧಾನವಾಗಿ ನೋಡಬೇಕಾಗಿದೆ. ಆದರೆ ಯಾವುದೂ ಗಂಟು ಮುಳುಗಿಹೋಗಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ಡಿಪೋ ಒಂದರಲ್ಲೇ 48 ಸಾವಿರ ರೂಪಾಯಿಗಳವರೆಗೆ ಹಣಹೋಗಿರುವಾಗ ಇನ್ನು ಉಳಿದ ಮೈನೂರು ಸ್ಟೇಟ ನಲ್ಲಿರತಕ್ಕ ಬಾಕಿ ಡಿಪೋಗಳಲ್ಲಿ ಇನ್ನೆಷ್ಟು ದುಡ್ಡು ಹೀಗೆ ಹೋಗಿದೆಯೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ದುಡ್ಡು ಹೋಗಿದೆಯೆಂದು ಯಾರೂ ಗಾಬರಿಯಾಗಬೇಕಾಗಿಲ್ಲ. ದುಡ್ಡೆಲ್ಲೂ ಹೋಗಿಲ್ಲ. ದುಡ್ಡಿದ್ದೇ ಇದೆ. ಆದರೆ ಅದರಲ್ಲಿ ಆಡಿಟರು ಕೆಲವು ಅಬ್ಜೆಕ್ಷನ್ಗಳನ್ನು ಹಾಕಿದ್ದಾರೆ ಅದಕ್ಕೆ ಕಾರಣವೇನೆಂದರೆ—ಯಾವುದೋ ಒಂದು ಊರಿಗೆ ರವಾನೆ ಮಾಡಿದಂಥ ಆಹಾರ ಧಾನ್ಯಗಳ ವ್ಯಾಗನ್ ಅಲ್ಲಿಗೆ ಹೋಗದೆ ಬೇರೆ ಎಲ್ಲಿಗೋ ಇನ್ನೊಂದು ಡಿಪೋವಿಗೆ ಹೋಗಿ ಬಿಟ್ಟಿರುತ್ತದೆ. ಹಾಗೆ ಯಾವುದೋ ಡಿಪೋವಿಗೆ ಒದಗಿಸಿದ ಕಾಳಿನ ದುಡ್ಡನ್ನು —ಯಾವುದೋ ಮತ್ತೊಂದು ಡಿಪೋವಿಗೆ ಖರ್ಚು ಹಾಕಿರುತ್ತಾರೆ. ಇಂಥಾದ್ದನ್ನೆಲ್ಲಾ ಸರಿಪಡಿಸಬೇಕು. ಲೆಕ್ಕಗಳನ್ನು ತನಿಖೆಮಾಡಿನೋಡಬೇಕಾಗಿದೆ. ಅಷ್ಟೇ ಹೊರತು ದುಡ್ಡೆಲ್ಲೂ ಹೋಗಿಲ್ಲ. 60-70 ಲಕ್ಷ ರೂಪಾಯಿಗಳ ಆಡಿಟ್ ಅಬ್ಜೆಕ್ಷನ್ ಬಂದಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನಾವು ಪದೇ ಪದೇ ಈ ವಿಷಯಗಳನ್ನು ಕೇಳುತ್ತಲೇ ಇದ್ದೇವೆ, ನೀವು ಹೀಗೆ ಹೇಳುತ್ತಲೇ ಇದ್ದೀರಿ. ಹೀಗೆ ತಾವು ಸರಿಯಾದ ನಿಗಾ ತೆಗೆದುಕೊಳ್ಳದೆ ಇದ್ದರೆ ಇದನ್ನು ಹೇಗೆ ತಡೆಗಟ್ಟುವುದು ?

ಶ್ರೀ ಎಚ್. ಸಿದ್ದವೀರಪ್ಪ.—ನಾನು ಈಗಾಗಲೇ ತಮಗೆ ತಿಳಿಸಿರುವಂತೆ, ಅಲ್ಲಿಗೆ ಆ ಲೆಕ್ಕಗಳನ್ನು ತನಿಖೆ ನಡೆಸಲು ಒಬ್ಬ ಸ್ಪೆಷಲ್ ಆಫೀಸರನ್ನು ಹಾಕಿದ್ದೇನೆ. ಆದಷ್ಟು ಜಾಗ್ರತೆ ಅದನ್ನೆಲ್ಲಾ ಕ್ರಮಪಡಿಸಿ, ತಮ್ಮಿಂದ ಈ ವಿಧವಾಗಿ ಪ್ರಶ್ನೆಗಳು ಮುಂತೆ ಬಾರದ ರೀತಿಯಲ್ಲಿ ಅದನ್ನು ಕ್ರಮಪಡಿಸಬೇಕೆಂಬ ಉದ್ದೇಶ ನನಗೆ ಇದೆ ಎಂದು ಇಷ್ಟು ಮಾತ್ರ ತಮಗೆ ಹೇಳ ಬಯಸುತ್ತೇನೆ.

QUESTIONS FOR ANSWERS ON THE DAY

(Not taken up)

Supply of Electricity to Periyapatna Taluk.

Q.—381. Sri S. M. MARIYAPPA (Periyapatna).—

Will the Government be pleased to state :—

(*a*) whether they have intended to supply electricity to Periyapatna Taluk in this current year ;